**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ**

ಸಂಖ್ಯೆ: ಆಕುಕನಿ/ಆಕಾ/38/2018-19 ದಿನಾಂಕ: 21.6.2018

**ಸುತ್ತೋಲೆ**

ವಿಷಯ: ಆರೋಗ್ಯ ಕರ್ನಾಟಕ ರೆಫರಲ್‌ಗಾಗಿ ಸೂಚನೆಗಳು - ಕುರಿತು

ಉಲ್ಲೇಖ:

1. ಸರ್ಕಾರದ ಆದೇಶ ಸಂಖ್ಯೆ: ಆಕುಕ 91 ಸಿಜಿಇ 2017, ದಿನಾಂಕ: 1.3.2018
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 91 ಸಿಜಿಇ 2017, ದಿನಾಂಕ: 1.6.2018

******

1. ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ಕ್ಲಿಷ್ಟಕರ ದ್ವಿತೀಯ ಹಂತದ ಆರೋಗ್ಯ ಸೇವೆಗಳು ಹಾಗೂ ತೃತೀಯ ಹಂತದ ಆರೋಗ್ಯ ಸೇವೆಗಳಿಗೆ ಅಗತ್ಯ ಚಿಕಿತ್ಸೆ ಒದಗಿಸುವ ಸಾಮರ್ಥ್ಯವನ್ನು ಜಿಲ್ಲೆಯಲ್ಲಿನ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಹೊಂದಿಲ್ಲದಿದ್ದ ಪಕ್ಷದಲ್ಲಿ ರೋಗಿಗಳಿಗೆ ರೆಫರಲ್ ವ್ಯವಸ್ಥೆಯ ಮಾನದಂಡಗಳನ್ನು ರೂಪಿಸಲು ಅವಕಾಶ ಕಲ್ಪಿಸಲಾಗಿದೆ.

2. ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ, ಐಟಿ ವ್ಯವಸ್ಥೆ ಆಧಾರಿತ ರೆಫರಲ್ ಮಾನದಂಡಗಳು ಜಾರಿಗೊಳ್ಳುವವರೆಗೆ ಜಿಲ್ಲೆ ಹಾಗೂ ತಾಲೂಕಿನ ಹಂತದ ಎಲ್ಲ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಮಾನ್ಯುಯಲ್ ರೆಫರಲ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿರುತ್ತದೆ. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರು ಸೂಚಿಸಿದ ರೆಫರಲ್ ನಮೂನೆಯಲ್ಲಿ ತಜ್ಞ ವೈದ್ಯರು ರೆಫರಲ್ ಶಿಫಾರಸ್ಸನ್ನು ದಾಖಲಿಸುವಂತೆ ಅದೇ ಸರ್ಕಾರಿ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

3. ಜಿಲ್ಲೆ ಮತ್ತು ತಾಲ್ಲೂಕು ಹಂತದ ಎಲ್ಲ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಅಳವಡಿಸಿಕೊಳ್ಳಬೇಕಾದ ರೆಫರಲ್ ನಮೂನೆಯನ್ನು ಈ ಸುತ್ತೋಲೆಯ ಅನುಬಂಧದಲ್ಲಿ ಲಗತ್ತಿಸಲಾಗಿದೆ. ಈ ನಮೂನೆಯನ್ನು ಚಿಕಿತ್ಸೆ ಹಾಗೂ ವೈದ್ಯಕೀಯ ಪರೀಕ್ಷೆಗಳ ರೆಪರಲ್‌ಗೆ ಬಳಸಿಕೊಳ್ಳತಕ್ಕದ್ದು.

4. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಖಾಲಿ ರೆಫರಲ್ ನಮೂನೆಗಳನ್ನು ಒದಗಿಸುತ್ತದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳು, ಸರಬರಾಜು ಕೋರಿಕೆಯನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಕನಿಷ್ಟ 15 ದಿನ ಮುಂಚಿತವಾಗಿ ತಿಳಿಸಬೇಕು. ಅಗತ್ಯಬಿದ್ದರೆ ನಮೂನೆಗಳನ್ನು ಸ್ಥಳೀಯವಾಗಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಮುದ್ರಿಸಿಕೊಳ್ಳಬಹುದಾಗಿದೆ.

5. ಅನುಕೂಲಕ್ಕಾಗಿ, ರೆಫರಲ್ ಪ್ರಕ್ರಿಯೆಗಳನ್ನು ಅನುಸರಿಸುವ ವಿಧಾನವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ:

i. ಉಲ್ಲೇಖಿತ ಸರ್ಕಾರಿ ಆದೇಶ(1) ರಲ್ಲಿ ಪಟ್ಟಿ ಮಾಡಿರುವ ಅನುಬಂಧ 1, 2ಎ, 2ಬಿ, 3 ಮತ್ತು 4 ರಲ್ಲಿ ವಿವರಿಸಿರುವ ಪ್ರಾಥಮಿಕ, ದ್ವಿತೀಯ, ಕ್ಲಿಷ್ಟಕರ ದ್ವಿತೀಯ, ತೃತೀಯ ಮತ್ತು ತುರ್ತು ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ತಮ್ಮಲ್ಲಿ ಲಭ್ಯವಿರುವ ವೈದ್ಯಕೀಯ ಸಾಮರ್ಥ್ಯಗಳನ್ನು ಜಿಲ್ಲೆ ಮತ್ತು ತಾಲ್ಲೂಕು

ಮಟ್ಟದ ಎಲ್ಲ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ನೋಡಲ್ ಅಧಿಕಾರಿಗಳು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಪೋರ್ಟಲ್‌ನಲ್ಲಿ ಇತ್ತೀಚಿನ ಸ್ಥಿತಿಯನ್ನು ನಮೂದು ಮಾಡತಕ್ಕದ್ದು.

ii. ಮೇಲಿನ ವಿವರಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಪ್ರಮುಖ ಸ್ಥಳದಲ್ಲಿ ಕಾಣುವಂತೆ ಪ್ರದರ್ಶನ ಮಾಡಬೇಕು.

iii. ಅನುಬಂಧ-2ಬಿ ಮತ್ತು 3 ರಲ್ಲಿ ಪಟ್ಟಿಮಾಡಿರುವ ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗಳು ಮತ್ತು ತೃತೀಯ ಹಂತದ ಚಿಕಿತ್ಸೆಗಳಿಗೆ ಮಾತ್ರ ರೆಫರಲ್ ಪದ್ಧತಿ ಲಭ್ಯವಿರುತ್ತದೆ.

iv. ಅನುಬಂಧ-1 ಮತ್ತು 2ಎ ರಲ್ಲಿ ಪಟ್ಟಿ ಮಾಡಿರುವ ಪ್ರಾಥಮಿಕ ಮತ್ತು ಸಾಮಾನ್ಯ ದ್ವಿತೀಯ ಹಂತದ ಚಿಕಿತ್ಸೆಗಳಿಗೆ ರೆಫರಲ್ ಇರುವುದಿಲ್ಲ.

v. ಅರ್ಹತಾ ರೋಗಿಗಳಿಗೆ ಅನುಬಂಧ-4 ರಲ್ಲಿ ಪಟ್ಟಿ ಮಾಡಿರುವ ತುರ್ತು ಚಿಕಿತ್ಸೆಗಳಿಗೆ ರೆಫರಲ್ ತೆಗೆದುಕೊಳ್ಳುವ ಅಗತ್ಯ ಇರುವುದಿಲ್ಲ. ಅವರು ಯಾವುದೇ ರೆಫರಲ್ ಇಲ್ಲದೆ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದು. ಸಾಮಾನ್ಯ ರೋಗಿಗಳಿಗೆ ತುರ್ತುಚಿಕಿತ್ಸೆಯ ಸೌಲಭ್ಯವನ್ನು ಮುಂದಿನ ಕೆಲವು ತಿಂಗಳಲ್ಲಿ ಅಂದರೆ ಖಾಸಗಿ ಆಸ್ಪತ್ರೆಗಳಲ್ಲಿ ನೋಂದಣಿ ಮತ್ತು ದೃಢೀಕರಣ ವ್ಯವಸ್ಥೆ ಪ್ರಾರಂಭಗೊಂಡ ನಂತರ ತೆರೆಯಲಾಗುವುದು.

vi. ಜಿಲ್ಲೆ ಮತ್ತು ತಾಲ್ಲೂಕು ಹಂತದ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಪ್ರಾಥಮಿಕ ಮತ್ತು ಸಾಮಾನ್ಯ ದ್ವಿತೀಯ ಹಂತದ ಚಿಕಿತ್ಸೆಗಳಿಗೆ ಸಂಬಂಧಿಸಿದ ವೈದ್ಯಕೀಯ ಸಾಮರ್ಥ್ಯದ ಕೊರತೆಯಿದ್ದಲ್ಲಿ ಮಾನವ ಸಂಪನ್ಮೂಲ, ವೈದ್ಯಕೀಯ ಉಪಕರಣ, ಔಷಧಿಗಳು ಮುಂತಾದವುಗಳನ್ನು ಒದಗಿಸುವ ಬಗ್ಗೆ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಥವಾ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರಿಗೆ ಒಂದು ವಾರದೊಳಗೆ ಪ್ರಸ್ತಾವನೆ ಸಲ್ಲಿಸುವುದು.

vii. ಒಂದೊಮ್ಮೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗಳು ಅಥವಾ ತೃತೀಯ ಹಂತದ ಚಿಕಿತ್ಸೆಗಳಿಗೆ ಸಂಬಂಧಿಸಿದ ರೋಗನಿರ್ಣಯ ಪರೀಕ್ಷೆ ನಡೆಸುವ ಸೌಲಭ್ಯಗಳನ್ನು ಹೊಂದಿಲ್ಲದಿದ್ದರೆ, ಈ ಸೌಲಭ್ಯಗಳು ಆಸ್ಪತ್ರೆಯಲ್ಲಿ ಸ್ಥಾಪನೆಗೊಳ್ಳುವವರೆಗೆ ಅದೇ ಪಟ್ಟಣ ಅಥವ ನಗರದಲ್ಲಿರುವ ಖಾಸಗಿ ವೈದ್ಯಕೀಯ ಕೇಂದ್ರಗಳಲ್ಲಿ ಸದರಿ ಸೌಲಭ್ಯಗಳು ಲಭ್ಯವಿದ್ದಲ್ಲಿ ಆ ಸಂಸ್ಥೆಯೊಂದಿಗೆ ಹೊರಗುತ್ತಿಗೆ ಆಧಾರದಲ್ಲಿ ಅಗತ್ಯ ಸೇವೆಗಳನ್ನು ಪಡೆದುಕೊಳ್ಳಲು ಸಹಯೋಗ (tie-up) ಮಾಡಿಕೊಳ್ಳುವ ಕುರಿತು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸುವುದು.

viii. ಪ್ರತಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ತಜ್ಞರು ಮತ್ತು ನೋಡಲ್ ಅಧಿಕಾರಿಗಳು ತಮ್ಮ ಆಸ್ಪತ್ರೆಯ ವೈದ್ಯಕೀಯ ಸಾಮರ್ಥ್ಯಗಳ ಬಗ್ಗೆ ಪರಿಚಯ ಹೊಂದಿರತಕ್ಕದ್ದು.

ix. ತಾಲೂಕು ಮಟ್ಟದ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ತಜ್ಞರು ಮತ್ತು ನೋಡಲ್ ಅಧಿಕಾರಿಗಳು ಜಿಲ್ಲೆಯ ಮತ್ತು ಪಕ್ಕದ ತಾಲೂಕುಗಳ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿನ ವೈದ್ಯಕೀಯ ಸಾಮರ್ಥ್ಯಗಳ ಬಗ್ಗೆಯೂ ಸಹ ಪರಿಚಯ ಹೊಂದಿರಬೇಕು.

x. ರೆಫರಲ್ ಸುಲಭವಾಗುವಂತೆ ಮಾಡಲು ನೋಡಲ್ ಅಧಿಕಾರಿಗಳು ತಮ್ಮ ಸ್ವಂತ ಆಸ್ಪತ್ರೆಯ ಮತ್ತು ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿನ ವೈದ್ಯಕೀಯ ಸಾಮರ್ಥ್ಯಗಳ ಇತ್ತೀಚಿನ ಸ್ಥಿತಿಯ ವಿವರವನ್ನು ತಜ್ಞ ವೈದ್ಯರುಗಳಿಗೆ ಒದಗಿಸುವುದು.

xi. ಯಾವ ಸಾರ್ವಜನಿಕ ಆರೋಗ್ಯ ಸಂಸ್ಥೆ ರೋಗಿಗೆ ಚಿಕಿತ್ಸೆಗಾಗಿ ಅಥವಾ ರೋಗ ನಿರ್ಣಯ ಪರೀಕ್ಷೆಗಾಗಿ ರೆಫರಲ್ ಪದ್ಧತಿಯನ್ನು ಪ್ರಾರಂಭ ಮಾಡುತ್ತದೆಯೋ ಅದಕ್ಕೆ "ಇನಿಷಿಯೇಟಿಂಗ್/ಪ್ರಾರಂಭಿಸುವ ಸಾರ್ವಜನಿಕ ಆರೋಗ್ಯ ಸಂಸ್ಥೆ" ಎಂದು ಕರೆಯಲಾಗುವುದು.

xii. ಯಾವ ಆಸ್ಪತ್ರೆಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಯು ರೋಗಿಯನ್ನು ಚಿಕಿತ್ಸೆಗಾಗಿ ಅಥವಾ ರೋಗ ನಿರ್ಣಯ ಪರೀಕ್ಷೆಗಾಗಿ ರೆಫರಲ್ ಮಾಡಲಾಗುತ್ತದೆಯೋ ಆ ಆಸ್ಪತ್ರೆಗೆ "ರೆಫರ್ಡ್ ಆಸ್ಪತ್ರೆ" ಎಂದು ಕರೆಯಲಾಗುತ್ತದೆ.

xiii. ರೆಫರಲ್ ವ್ಯವಸ್ಥೆಗಾಗಿ, ಜಿಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಯು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತದಲ್ಲಿ ಒಳಪಟ್ಟಿರುವ ಪ್ರಮುಖ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಹಾಗೂ ಸರ್ಕಾರದಿಂದ ನೆರವು ಪಡೆಯುತ್ತಿರುವ ಸ್ವಾಯತ್ತ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.

**ತಾಲ್ಲೂಕು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಂದ ರೆಫರಲ್**

xiv. ತಾಲೂಕು ಸಾರ್ವಜನಿಕ ಆರೋಗ್ಯ ಸಂಸ್ಥೆಯ ತಜ್ಞ ವೈದ್ಯರ ಅಭಿಪ್ರಾಯದಂತೆ ಒಂದೊಮ್ಮೆ ರೋಗಿಗೆ ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆ ಅವಶ್ಯಕವಿದ್ದಲ್ಲಿ ಹಾಗೂ ಆ ನಿರ್ಧಿಷ್ಟ ಚಿಕಿತ್ಸೆಯು ಸದರಿ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಲಭ್ಯವಿಲದಿದ್ದಲ್ಲಿ, ತಾಲೂಕು ಆಸ್ಪತ್ರೆಯ ತಜ್ಞರು ಆ ಚಿಕಿತ್ಸೆಗೆ ಜಿಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಸೌಲಭ್ಯ ಇದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

a) ಜಿಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಯು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಪೋರ್ಟಲ್‌ನಲ್ಲಿ ಘೋಷಿಸಿರುವಂತೆ ಅವಶ್ಯಕ ಚಿಕಿತ್ಸೆಯು ಜಿಲ್ಲಾ ಆರೋಗ್ಯ ಸಂಸ್ಥೆಯಲ್ಲಿ ಲಭ್ಯವಿದ್ದಲ್ಲಿ ರೋಗಿಯನ್ನು ಜಿಲ್ಲಾ ಆರೋಗ್ಯ ಸಂಸ್ಥೆಗೆ ರೆಫರ್ ಮಾಡತಕ್ಕದ್ದು.

ಇಂತಹ ಸಂದರ್ಭದಲ್ಲಿ ರೆಫರಲ್ ನಮೂನೆಯ 'ರೆಫರ್ಡ್ ಆಸ್ಪತ್ರೆ' ಎಂಬ ಸ್ಥಳದಲ್ಲಿ "ಜಿಲ್ಲಾ ಆರೋಗ್ಯ ಸಂಸ್ಥೆಯ ಹೆಸರು ಮತ್ತು ಸ್ಥಳ" ವನ್ನು ನಮೂದಿಸಬೇಕು.

b) ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಪೋರ್ಟಲ್‌ನಲ್ಲಿ ಘೋಷಿಸಿಕೊಂಡಂತೆ ರೋಗಿಗೆ ಅಗತ್ಯವಿರುವ ಚಿಕಿತ್ಸೆಯು ಜಿಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ ರೋಗಿಯನ್ನು ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಮಾಡಬಹುದಾಗಿದೆ. ಇಂತಹ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ನಿರ್ಧಿಷ್ಟವಾದ ಖಾಸಗಿ ಆಸ್ಪತ್ರೆಯ ಹೆಸರನ್ನು ಸೂಚಿಸುವಂತಿಲ್ಲ.

ರೆಫರಲ್ ನಮೂನೆಯ 'ರೆಫರ್ಡ್ ಆಸ್ಪತ್ರೆ' ಎಂಬ ಸ್ಥಳದಲ್ಲಿ ಕೇವಲ "ನೋಂದಾಯಿತ ಖಾಸಗಿ ಆಸ್ಪತ್ರೆ" ಎಂದು ಮಾತ್ರ ನಮೂದಿಸಬೇಕು

**ಬೆಂಗಳೂರು ಹೊರತು ಪಡಿಸಿ ಇತರ ಜಿಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಂದ ರೆಫರಲ್**

xv. ಬೆಂಗಳೂರು ಜಿಲ್ಲೆಯ ಹೊರತಾಗಿ ಬೇರೆ ಯಾವುದೇ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸಂಸ್ಥೆಯ ತಜ್ಞ ವೈದ್ಯರು ರೋಗಿಗೆ ಕ್ಲಿಷ್ಟಕರ ದ್ವಿತೀಯ ಹಂತದ ಅಥವಾ ತೃತೀಯ ಹಂತದ ಚಿಕಿತ್ಸೆಯ ಅವಶ್ಯಕತೆ ಇದ್ದಲ್ಲಿ ಹಾಗೂ ಆ ನಿರ್ದಿಷ್ಟವಾದ ಸೌಲಭ್ಯವು ಆ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ, ಸದರಿ ರೋಗಿಯನ್ನು ಯಾವುದೇ ನಿರ್ದಿಷ್ಟ ಆಸ್ಪತ್ರೆಗೆ ಸೂಚಿಸದೆ ನೋಂದಾಯಿತ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡಬಹುದಾಗಿದೆ.

ರೆಫರಲ್ ನಮೂನೆಯ 'ರೆಫರ್ಡ್ ಆಸ್ಪತ್ರೆ' ಎಂಬ ಸ್ಥಳದಲ್ಲಿ ಕೇವಲ "ನೋಂದಾಯಿತ ಖಾಸಗಿ ಆಸ್ಪತ್ರೆ" ಎಂದು ಮಾತ್ರ ನಮೂದಿಸಬೇಕು

**ಬೆಂಗಳೂರಿನ ಪ್ರಮುಖ ಸಾರ್ವಜನಿಕಆರೋಗ್ಯ ಸಂಸ್ಥೆಗಳಿಂದ ರೆಫರಲ್**

xvi. ರೋಗಿಗೆ ಕ್ಲಿಷ್ಟಕರ ದ್ವಿತೀಯ ಹಂತದ ಅಥವಾ ತೃತೀಯ ಹಂತದ ಚಿಕಿತ್ಸೆಯನ್ನು ಒದಗಿಸಲು ಬೆಂಗಳೂರಿನ ಪ್ರಮುಖ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯ ಇಲ್ಲದಿದ್ದಲ್ಲಿ, ಸದರಿ ರೋಗಿಗೆ ಚಿಕಿತ್ಸೆ ಪಡೆದುಕೊಳ್ಳಲು ಯಾವುದೇ ನಿರ್ದಿಷ್ಟವಾದ ಆಸ್ಪತ್ರೆಯನ್ನು ಸೂಚಿಸದೆ ಬೆಂಗಳೂರಿನ ಉನ್ನತ ಮಟ್ಟದ ಸಾರ್ವಜನಿಕ ಆರೋಗ್ಯ ಸಂಸ್ಥೆ ಅಥವಾ ನೋಂದಾಯಿತ ಖಾಸಗಿ ಆಸ್ಪತೆಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡತಕ್ಕದ್ದು.

ರೆಫರಲ್ ನಮೂನೆಯ 'ರೆಫರ್ಡ್ ಆಸ್ಪತ್ರೆ' ಎಂಬ ಸ್ಥಳದಲ್ಲಿ ಕೇವಲ "ಸರ್ಕಾರಿ ಆಸ್ಪತ್ರೆ ಅಥವಾ ನೋಂದಾಯಿತ ಖಾಸಗಿ ಆಸ್ಪತ್ರೆ" ಎಂದು ಮಾತ್ರ ನಮೂದಿಸಬೇಕು.

**ನೋಡಲ್ ಅಧಿಕಾರಿಗಳಿಂದ ಅಧಿಕೃತಗೊಳಿಸುವಿಕೆ**

xvii. ತಾಲ್ಲೂಕು ಅಥವಾ ಜಿಲ್ಲೆ ಅಥವಾ ಉನ್ನತ ಸಾರ್ವಜನಿಕ ಆರೋಗ್ಯ ಸಂಸ್ಥೆಯ ತಜ್ಞ ವೈದ್ಯರಿಂದ ವಿಶ್ಲೇಷಿಸಿ ನೀಡಲಾದ ಎಲ್ಲ ರೀತಿಯ ರೆಫರಲ್ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ತಜ್ಞ ವೈದ್ಯರ ರೆಫರಲ್ ನಮೂನೆಯ ಜೊತೆಗೆ ಹೊರರೋಗಿ ಚೀಟಿಯನ್ನು ಪಡೆದುಕೊಳ್ಳುವಂತೆ ರೋಗಿಗೆ ಸಲಹೆ ನೀಡಬೇಕು.

xviii. ಸದರಿ ಸಾರ್ವಜನಿಕ ಆರೋಗ್ಯ ಸಂಸ್ಥೆಯ ಹಾಗೂ ಜಿಲ್ಲಾ ಸಾರ್ವಜನಿಕ ಆರೋಗ್ಯ ಸಂಸ್ಥೆಯ ವೈದ್ಯಕೀಯ ಸೌಲಭ್ಯ ಹಾಗೂ ಸಾಮರ್ಥ್ಯವನ್ನು ನೋಡಲ್ ಅಧಿಕಾರಿಗಳು ಪರಿಶೀಲಿಸಿ ರೆಫರಲ್ ನಮೂನೆಯನ್ನು ಅಧಿಕೃತಗೊಳಿಸಿ ದಾಖಲಿಸಿಕೊಳ್ಳಬೇಕು. ತದನಂತರ ಮೂಲ ರೆಫರಲ್ ನಮೂನೆಯನ್ನು ರೋಗಿಗೆ ಹಿಂತಿರುಗಿಸಬೇಕು. ಮೂಲ ರೆಫರಲ್ ನಮೂನೆಯ ನಕಲು ಪ್ರತಿಯನ್ನು ಸುವರ್ಣ ಆರೋಗ್ಯ ಸುರಕ್ಷಾಟ್ರಸ್ಟ್ ಪೋರ್ಟಲ್‌ನಲ್ಲಿ ಡೇಟಾಎಂಟ್ರಿಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿಕೊಳ್ಳಬೇಕು. ಈ ರೆಫರಲ್ ಪ್ರಕ್ರಿಯೆಯ ಆನ್‌ಲೈನ್ ತಂತ್ರಾಂಶ ವ್ಯವಸ್ಥೆಯನ್ನು ಶೀಘ್ರದಲ್ಲಿಯೇ ಜಾರಿಗೊಳಿಸಲಾಗುವುದು.

xix. ರೋಗಿಗಳ ಮಾಹಿತಿ ಹಾಗೂ ತಿಳುವಳಿಕೆಗಾಗಿ ಪ್ರತಿ ಜಿಲ್ಲೆಗಳಿಗೆ ಅನ್ವಯವಾಗುವಂತೆ ನೋಂದಾಯಿತ ಖಾಸಗಿ ಆಸ್ಪತ್ರೆಗಳ ಹಾಗೂ ಸಮೀಪದ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಪಟ್ಟಿಯನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಯ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಬೇಕು.

xx. ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಆದ ರೋಗಿಗೆ ಅವರ ಇಷ್ಟಾನುಸಾರವಾಗಿ ಚಿಕಿತ್ಸೆಗೆ ಆಸ್ಪತ್ರೆಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

6. ರೆಫರಲ್ ಸಮಯದಲ್ಲಿ ರೋಗಿಯ ಚಿಕಿತ್ಸೆಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ ನೋಡಿಕೊಳ್ಳುವುದು ಆಯಾ ಆಸ್ಪತ್ರೆಗಳ ಅಧೀಕ್ಷಕರುಗಳು ಮತ್ತು ನೋಡಲ್ ಅಧಿಕಾರಿಗಳ ಜವಾಬ್ಧಾರಿಯಾಗಿರುತ್ತದೆ

7. ಪ್ರತಿ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಿಂದ ನಿಯೋಜನೆಗೊಂಡ 'ಆರೋಗ್ಯ ಮಿತ್ರ'ರು ನೋಡಲ್ ಅಧಿಕಾರಿಗಳಿಂದ ರೆಫರಲ್ ಪಡೆದುಕೊಳ್ಳಲು ರೋಗಿಗಳಿಗೆ ಸಹಕರಿಸಬೇಕು.

8. ಗಮನಿಸಬೇಕಾದ ಪ್ರಮುಖ ಅಂಶವೇನೆಂದರೆ ಸಂಬಂಧಿಸಿದ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ರೋಗಿಯ ಚಿಕಿತ್ಸೆಗೆ ಅಗತ್ಯವಿರುವ ಸೌಲಭ್ಯ ಹಾಗೂ ಸಾಮರ್ಥ್ಯ ಇಲ್ಲದಿದ್ದಲ್ಲಿ ಮಾತ್ರ ರೆಫರಲ್ ಅನ್ನು ನೀಡಬೇಕು.

21/6/18

(ಡಾ: ಕೆ. ಶ್ರೀನಿವಾಸ ಗೌಡ)
**ನಿರ್ದೇಶಕರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಇವರಿಗೆ:**

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
2. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು
3. ಕರ್ನಾಟಕ ಸರ್ಕಾರದಿಂದ ಪ್ರಾಯೋಜಿಸಲ್ಪಟ್ಟ ಎಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಸ್ವಾಯತ್ತ ಆಸ್ಪತ್ರೆಗಳ ನಿರ್ದೇಶಕರುಗಳು
4. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತದಲ್ಲಿರುವ ಎಲ್ಲಾ ಆಸ್ಪತ್ರೆಗಳ ಆಸ್ಪತ್ರೆ ಅಧೀಕ್ಷಕರುಗಳು
5. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತದಲ್ಲಿರುವ ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರುಗಳು.
6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಡಳಿತದಲ್ಲಿರುವ ಎಲ್ಲಾ ಆಸ್ಪತ್ರೆಗಳ ಮುಖ್ಯ ಆಡಳಿತ ವೈದ್ಯಾಧಿಕಾರಿಗಳು
7. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್

**ಪ್ರತಿ ಮಾಹಿತಿಗಾಗಿ:**

1. ಅಪರ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
2. ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆನಂದರಾವ್ ವೃತ್ತ, ಬೆಂಗಳೂರು.
5. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
6. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ವಿಶೇಷ ಕರ್ತವ್ಯಾಧಿಕಾರಿ.

ಅನುಬಂಧ

| | | | | |
|---|---|---|---|---|
| **ಆರೋಗ್ಯ ಕರ್ನಾಟಕ– ರೆಫರಲ್ ನಮೂನೆ** | ರೆಫರಲ್ ಸಂಖ್ಯೆ | | ದಿನಾಂಕ | |

| | | | |
|---|---|---|---|
| ಪ್ರಾರಂಭಿಕ ಸಾರ್ವಜನಿಕ ಆರೋಗ್ಯ ಸಂಸ್ಥೆ | | ರೋಗಿಯ ಹೆಸರು | |

| | | | | | |
|---|---|---|---|---|---|
| ಆರ್ಕಿಡ್/ಪಡಿತರ ಚೀಟಿ ಗುರುತು | ಬಿಪಿಎಲ್ | | ಹೊರರೋಗಿ/ಒಳರೋಗಿ ಗುರುತಿನ ಚೀಟಿ | ಲಿಂಗ | |
| | (Tick Relevant Box) | | | | |
| | ಎಪಿಎಲ್ | | | ವಯಸ್ಸು | |

| | | | |
|---|---|---|---|
| ಆಧಾರ್ | | ಮೊಬೈಲ್ | |

| | |
|---|---|
| ಪ್ರಮುಖ ವೈದ್ಯಕೀಯ ಪತ್ತೆ/ ಗುರುತುಗಳು | |

| | | | |
|---|---|---|---|
| ರೋಗ ನಿರ್ಣಯ | | ಶಿಫಾರಸ್ಸುಗೊಂಡ ಚಿಕಿತ್ಸೆ | |
| | | ಚಿಕಿತ್ಸೆಯ ಕೋಡ್ | |

| | |
|---|---|
| ರೆಫರ್ಡ್ ಸ್ಪೆಷಾಲಿಟಿ | |

| | | | |
|---|---|---|---|
| ರೆಫರ್ಡ್ ಆಸ್ಪತ್ರೆ | | ರೆಫರಲ್‌ಗೆ ಕಾರಣಗಳು | |

| | | | | | |
|---|---|---|---|---|---|
| ರೆಫರಿಂಗ್ ಸ್ಪೆಷಲಿಸ್ಟ್ | ಹೆಸರು ಮತ್ತು ಹುದ್ದೆಯ ಮೊಹರು | | ನೋಡಲ್ ಅಧಿಕಾರಿ | ಹೆಸರು ಮತ್ತು ಹುದ್ದೆಯ ಮೊಹರು | |
| | | | | | |
| | ಸಹಿ | | | ಸಹಿ | |